III) ಆರ್ಥಿಕವಾಗಿ ಹಿಂದುಳಿದವರಿಗೆ ಸಣ್ಣಪುಟ್ಟವ್ಯಾಪಾರ ಮಾಡಲು ಸಾಲ ಪಡೆಯಂವಾಗ ಗ್ರಾಮಂ ಪಂಚಾಯಂತಿಯವರು ಲೈಸೆನ್ಸ್ ಕೇಳುವುದನ್ನು ತಪ್ಪಿಸುವುದರ ಬಗ್ಗೆ

ಶ್ರೀಮತಿ ಮನೋರ್ಕಮಂಮಂಧ್ವರಾಜ್.— ಸಮಗ್ರ ಗ್ರಾಮಾಣಾಭಿವೃದ್ಧಿ ಯೋಜನೆಯಂತೆ ಗುರುತಿಸಿದಾಗ ಅತ್ಯಂತ ದುರ್ಬಲದರ್ಗದವರಿಗೆ ಕೈಗಾಡಿ, ಎತ್ತಿನಗಾಡಿ ಕೊಳ್ಳಲು ತೆಂಗಿನಕಾಯಿ ಬಟ್ಟಿ ಬರೆ ಚಿಲ್ಲರೆ ಅಂಗಡಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುವವರಿಗೆ ಬ್ಯಾಂಕುಗಳ ಮೂಲಕ ಸಾಲ ಪಡೆಯಲು ಅವಕಾಶ ತೀರಾ ದುರ್ಬಲರಿಗೆ ಚಿಕ್ಕಪುಟ್ಟ ಉದ್ಯೋಗಾವಕಾಶಗಳಿಗೆ ಪಂಚಾಯತಿ ಮತ್ತು ಸ್ಥಳೀಯ ಸಂಸ್ಥೆಗಳಿಂದ ಲೈಸೆನ್ಸ್ ಪಡೆಯಬೇಕಾಗಿರುವುದು ದುರಾದೃಷ್ಟಕರ. ಯೋಜನೆಯ ಸವಲತ್ತುಗಳಿಗೆ ಆಯ್ಕೆಗೊಂಡ ಫಲಾನುಭವಿಗಳು ಸಹ ಗ್ರಾಮಗಳ ರಾಜಕೀಯದಿಂದ ಲೈಸೆನ್ಸ್ ಪಡೆಯಲು ಅಸಕ್ತರಾಗಿರುವುದರಿಂದ ಅಂತಹ ಜನರನ್ನು ಬಡತನ ರೇಖೆಯಿಂದ ಮೇಲಕ್ಕೆ ಎತ್ತುವಂತಹ ಸರ್ಕಾರದ ಯೋಜನೆ ಕುಂಠಿತವಾಗುತ್ತದೆ. ಆದುದರಿಂದ ಮುಕ್ತ ವಾತಾವರಣದಲ್ಲಿ ವ್ಯಾಪಾರಕ್ಕೆ ಅನುವು ಮಾಡಿಕೊಡುವ ಸಲುವಾಗಿ ಈ ದುರ್ಬಲರಿಗೆ ಲೈಸೆನ್ಸ್ ಪಡೆದುಕೊಳ್ಳುವ ಸಲುವಾಗಿ ಸರ್ಕಾರವು ವಿನಾಯಿತಿ ಮಾಡಿಕೊಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧ ಪಟ್ಟ ಮಂತ್ರಿಗಳಿಗೆ ತಿಳಿಸಿ, ಅವರಿಂದ ಉತ್ತರ ತರಿಸಿ ಕೊಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ—ಬಾಟ್ಲಿಂಗ್ ವಿಚಾರ ಪ್ರಸ್ತಾಪ ಮಾಡಿದಾಗ ಎಲ್ಲಾಮಂತ್ರಿಗಳು ಸಭೆಯಲ್ಲಿದ್ದರು. ಈಗ ಮಂತ್ರಿಗಳಿಲ್ಲ.

೨-೩೦ ಪಿ ಎಂ.

iv) ಸೋಶಿಯಲ್ ವೆಲ್‌ಫೇರ್ ಇಲಾಖೆಯ ನೌಕರರ ಮುಷ್ಕರದ ಬಗ್ಗೆ

ಶ್ರೀ ಜಿ. ರಾಜುಗೌಡ (ಹನೂರು) – ಮಾನ್ಯ ಅಧ್ಯಕ್ಷರೆ, ದಿನಾಂಕ ೧೦-೩-೧೯೮೬ರಂದು ಕರ್ನಾಟಕ ರಾಜ್ಯಾದ್ಯಾಂತ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟವರ್ಗಗಳ ಇಲಾಖಾ ನೌಕರರುಗಳು ತಮ್ಮ ಬಹಳ ಕಾಲದ ಬೇಡಿಕೆಯು ಈಡೇರದಿರುವುದರಿಂದ ಅನಿರ್ದಿಷ್ಟಕಾಲ ಮುಷ್ಕರ ಹೂಡಲು ನಿರ್ಧರಿಸಿರುವುದರಿಂದ, ಆಶ್ರಮ ಶಾಲೆಗಳ ವಸತಿ ಶಾಲೆಗಳು ವಿದ್ಯಾರ್ಥಿನಿಲಯಗಳ ಎಲ್ಲಾ ವರ್ಗದ ನೌಕರರುಗಳು ಮುಷ್ಕರದಲ್ಲಿ ಭಾಗವಹಿಸುವುದರಿಂದ ಆ ಕಾಲದಲ್ಲಿ ಆಶ್ರಮಶಾಲೆಗಳ ವಸತಿ ಶಾಲೆಗಳ ವಿದ್ಯಾರ್ಥಿನಿಲಯಗಳ ಮಕ್ಕಳುಗಳಿಗೆ ಊಟೋಪಚಾರಗಳಿಗೆ ಮಾಡಿರುವ ಪರ್ಯಾಯ ವ್ಯವಸ್ಥೆಯನು ಎಂಬುದನ್ನು ಮಾನ್ಯ ಸಮಾಜ ಕಲ್ಯಾಣ ಮಂತ್ರಿಯವರಲ್ಲಿ ತಿಳಿಯಬಯಸುತ್ತೇನೆ.

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ತಿಂಗಳ ೧೦ನೇ ತಾರೀಖು ಸಂಪನ್ನು ಮಾಡಲಾಗುತ್ತದೆಂದು ನೌಕರರು ತಿಳಿಸಿದ್ದಾರೆ. ಅವರು ಏಳು ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ. ಏಳು ಬೇಡಿಕೆಗಳಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಹಾಗೆ ಮೂರು ಬೇಡಿಕೆಗಳು ಬರುತ್ತವೆ. ಅವರ ಮೂರು ಬೇಡಿಕೆಗಳನ್ನು ಪರಿಹಾರ ಮಾಡಲಿಕ್ಕೆ ಸಾಧ್ಯವೇ ಎಂಬುದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಪ್ರೌಢ ಶಾಲೆಗಳಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡಲು ಮುಖ್ಯೋಪಾಧ್ಯಾಯರಿಗೆ ಅಧಿಕಾರ

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ, ಸರಕಾರಿ ಜೂನಿಯರ್ ಕಾಲೇಜು ಮತ್ತು ಸರಕಾರಿ ಹೈಸ್ಕೂಲುಗಳಲ್ಲಿ ಎರಡನೇ ದರ್ಜೆಯ ಪದವೀಧರ ಅಧ್ಯಾಪಕರನ್ನು ತಾತ್ಕಾಲಿಕವಾಗಿ ನೇಮಿಸುವ ಸರಕಾರಿ ಆಜ್ಞೆ ನಂ. ಡಿ : ೩೭೬ : ಇಪಿಐ: ೮೫ ತಾರೀಖು ೨೮-೧-೮೬ರಂತೆ ಜೂನಿಯರ್ ಕಾಲೇಜುಗಳಲ್ಲಿನ ಲೆಕ್ಚರರನ್ನು ನೇಮಿಸಲು ಆಯಾ ಕಾಲೇಜಿನ ಪ್ರಾಂಶುಪಾಲರುಗಳಿಗೆ ಅಧಿಕಾರ ನೀಡಲಾಗಿದೆ. ಹೈಸ್ಕೂಲುಗಳಲ್ಲಿ ಅಧ್ಯಾಪಕರನ್ನು ನೇಮಿಸಲು ಆಯಾ ಜಿಲ್ಲೆಯ ವಿದ್ಯಾಂಗ ಉಪ ನಿರ್ದೇಶಕರಿಗೆ ಅಧಿಕಾರ ನೀಡಲಾಗಿದೆ ಆದರೆ ಜೂನಿಯರ್ ಕಾಲೇಜುಗಳ ಹೈಸ್ಕೂಲ್ ವಿಭಾಗದ